ಓ.ಎಸ್. ನಂಃ 15/2018 ಡಿ.ಡಬ್ಲ್ಯೂ (3)/ ಸಾಕ್ಷಿ

**ದಿನಾಂಕಃ 24-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**<u>ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ BCG ವಕೀಲರಿಂದಃ</u>**

1. ನಾನು ಶಾಲೆ ಕಲೆತಿಲ್ಲ. ಆಸ್ತಿಯಲ್ಲಿ ಪಾಲು ಕೇಳಿ ಯಮನವ್ವ ಅವಳ ತಂದೆಯ ವಿರುದ್ಧ ಕೇಸ್ ಹಾಕಿದ್ದಾಳೆ ಅಂದರೆ ಸರಿ. ನನ್ನ ಮೇಲೆ ಜೆ.ಎಮ್.ಎಫ್.ಸಿ ಕೋರ್ಟಿನಲ್ಲಿ ಕ್ರಿಮಿನಲ್ ಕೇಸ್ ಇದೆ ಅಂದರೆ ಸರಿ. ಅದು ಚಾಲ್ತಿ ಇದೆ ಅಂದರೆ ಸರಿ. ಜಿಲ್ಲಾ ನ್ಯಾಯಾಲಯದಲ್ಲಿಯೂ ಸಹ ನನ್ನ ಮೇಲೆ ಕೇಸ್ ನಡೆಯುತ್ತಿದೆ ಅಂದರೆ ಸರಿ. ಕರಿಯಪ್ಪ ಬಸವ್ವನನ್ನು 2 ನೇ ಹೆಂಡತಿಯಾಗಿ ಮಾಡಿಕೊಂಡಿದ್ದಾನೆ ಅಂದರೆ ಸರಿ. ಆ ಮದುವೆ ನಾನೇ ಮಾಡಿದೆ ಅಂದರೆ ಸರಿ . ದೈವವೆಲ್ಲಾ ಕೂಡಿ ಮಾಡಿದ್ದೇವೆ. ಮೊದಲ ಹೆಂಡತಿ ಶಿವನಾಗಮ್ಮ ಬದುಕಿದ್ದಾಳೆ ಎಂದರೆ ಸರಿ. ಮೊದಲ ಹೆಂಡತಿ ಬದುಕಿದ್ದಾಗ 2 ನೇ ಹೆಂಡತಿ ಮಾಡುವುದು ಕಾನೂನು ಪ್ರಕಾರ ತಪ್ಪು ಎನ್ನುವುದು ಸರಿ.

2. ನಿಡಿ-1 ರ ಮೇಲೆ ಸಹಿ ಮಾಡಿರುವ ಬಸವರಾಜ್ ತಂದೆ ಬಸಪ್ಪ ಜಬ್ಬಲಗುಡ್ಡ ಬೇರೆ ಮತ್ತು ನಾನು ಬೇರೆ ಅನ್ನುವುದು ಸರಿ. ನಿಡಿ-1 ದತ್ತಕ ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ.ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರ ವಕೀಲರು ಬರೆದು ಹಾಕಿದ್ದಾರೆ ಅಂದರೆ ಸರಿ, ಅದರಲ್ಲಿ ಏನು ಬರೆದಿದೆ ಎಂದು ನನಗೆ ಮಾಹಿತಿ ಇಲ್ಲ ಅಂದರೆ ಸರಿ. ದತ್ತಕ ಯಾವ ದಿನ ಬರೆದರು ಮತ್ತು ಎಲ್ಲಿ ಬರೆದರು ಅನ್ನುವುದು ಗೊತ್ತಿಲ್ಲ ಅನ್ನುವುದು ಸರಿ.

3. ಕರಿಯಪ್ಪ ವಾದಿಯ ತಾಯಿ ಬಸಮ್ಮನನ್ನು ಮನೆಯಿಂದ ಹೊರಗೆ ಹಾಕಿದ್ದಾನೆ ಅನ್ನುವುದು ಗೊತ್ತಿಲ್ಲ. ಬಸವ್ವ ಜೀವನಾಂಶ ಕೇಳಿ ಕರಿಯಪ್ಪನ ವಿರುದ್ಧ ಕೇಸ್ ಹಾಕಿದ್ದಾಳೆ ಅಂದರೆ ಸರಿ. ಅದರಲ್ಲಿ ತಿಂಗಳಿಗೆ 5,000/- ರೂಪಾಯಿ ಕೊಡಬೇಕು ಎಂದು ಆದೇಶ ಆಗಿದೆ ಎಂದರೆ ಗೊತ್ತಿಲ್ಲ. Criminal Misc No.28/2025 ಜೀವನಾಂಶ ವಸೂಲಾತಿಗಾಗಿ ಕುಟುಂಬ ನ್ಯಾಯಾಲಯದಲ್ಲಿ ಪೆಂಡಿಂಗ್ ಇದೆ ಅಂದರೆ ಸರಿ. ನನಗೆ ವೈಯಕ್ತಿಕವಾಗಿ ಈ ಪ್ರಕಾರ ಕುರಿತು ಮಾಹಿತಿ ಇಲ್ಲ ಅಂದರೆ ಸರಿ. ಕರಿಯಪ್ಪ ಸಾಕ್ಷಿ ಹೇಳಲು ಕರೆದಿದ್ದರಿಂದ ಆತನ ಮಾತು ಕೇಳಿ ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿ. ಆತನ ಮಾತು ಕೇಳಿ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಹಿರಿಯ ವ್ಯವಹಾರ ನ್ಯಾಯಾಧೀಶರು, ಕೊಪ್ಪಳ.**